# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ
# ಅಫಜಲಪೂರ

ಸಿಸಿ ನಂ.283/2016

ಚಾಸಾ-14 ಪ್ರಾಸಾ-13

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 24.03.2022

| | | |
|---|---|---|
| ಹೆಸರು | ಃ | ಅಮರನಾಥ |
| ತಂದೆಯ ಹೆಸರು | ಃ | ಕುಪೇಂದ್ರ |
| ವಯಸ್ಸು | ಃ | 36 ವರ್ಷ |
| ಉದ್ಯೋಗ | ಃ | PWD Engineer |
| ವಾಸಸ್ಥಳ | ಃ | ಕಲಬುರಗಿ |

ಃ ಮುಖ್ಯ ವಿಚಾರಣೆ ಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ

2010 ರಿಂದ 2015 ರ ವರೆಗೆ ಅಫಜಲಪೂರದಲ್ಲಿ PWD ಕಚೇರಿಯಲ್ಲಿ ಸಹಾಯಕ ಅಭಿಯಂತರರು ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ. ನಮ್ಮ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಾದ ಶ್ರೀ ಟಿಎಚಎಂ ಕುಮಾರ ರವರು 2014 ನೇ ಸಾಲಿನಲ್ಲಿ ಅಫಜಲಪೂರ ತಾಲೂಕಿನ ಗೌರ(ಬಿ) ಗ್ರಾಮ ಪಂಚಾಯತಿಗೆ ಸಂಬಂಧಿಸಿದ ಕಾಮಗಾರಿಗಳನ್ನು ಪರೀಶಿಲಿಸಿ ವರದಿ ನೀಡುವಂತೆ ನನಗೂ ಹಾಗೂ ಅಫಜಲಪೂರದಲ್ಲಿ ತಾಂತ್ರಿಕ ಸಹಾಯಕ ಎಂದು ಕೆಲಸ ಮಾಡುತ್ತಿದ್ದ ಶ್ರೀ ವಿಶ್ವನಾಥ ಜೋಶಿ ರವರಿಗೆ ಆದೇಶಿಸಿದ್ದರು, ನಾನು ಹಾಗುಾ ಅವರು 2014 ರಲ್ಲಿ ಸದರಿ ಗೌರ(ಬಿ) ಗ್ರಾಮಕ್ಕೆ ಹೋಗಿ ಸುಮಾರು 35 ಕಾಮಗಾರಿಗಳನ್ನು ಪರೀಶಿಲನೆ ಮಾಡಿರುತ್ತೇನೆ. ಸದರಿ ಕಾಮಗಾರಿಗಳ ದಾಖಲೆಗಳನ್ನು ನೋಡಿದರೇ ಹೇಳುತ್ತೇನೆ. ಸದರಿ ಕಾಮಗಾರಿಗಳನ್ನು ಪರೀಶಿಲನೆ ಮಾಡಿ ವರದಿಯನ್ನು ತಯ್ಯಾರಿಸಿ ಕಲಬುರಗಿ ಜಿಲ್ಲಾ ಪಂಚಾಯತಿ ಸಿಇಓ ರವರಿಗೆ ಸಲ್ಲಿಸಿರುತ್ತೇನೆ.

ನಾನು ಕಾಮಗಾರಿಗಳ ಪರೀಶಿಲನೆ ಮಾಡಿದ ಸಮಯದಲ್ಲಿ ಕಾಮಗಾರಿಗಳ ಸ್ಥಿತಿ-ಗತಿಗಳ ಬಗ್ಗೆ ವರದಿ ನೀಡಿರುತ್ತೇನೆ. ಸಾಕ್ಷಿಯು ಕಲಬುರಗಿ ಜಿಲ್ಲಾ ಪಂಚಾಯತಿ ಸಿಇಓ ರವರಿಗೆ ತಾನು ಸಲ್ಲಿಸಿದ 51-ಪುಟಗಳ ವರದಿಯನ್ನು ನೋಡಿ ಗುರುತಿಸಿರುತ್ತಾರೆ . ಅದನ್ನು ನಿಪಿ**-20** ಎಂದು ಗುರುತಿಸಲಾಯಿತು . ಸಾಕ್ಷಿಯು 55-ಸಹಿಗಳನ್ನು ನೋಡಿ ಗುರುತಿಸಿದ್ದು ನಿಪಿ**-20 (1)** ರಿಂದ **(51)** ಎಂದು ಗುರುತಿಸಲಾಯಿತು .

<u>ಪಾಟೀ ಸವಾಲುಃ</u> ಆರೋಪಿ ಪರ ಶ್ರೀ ಎಸ.ಎಸ.ಪಿ. ವಕೀಲರಿಂದ

ಆರೋಪಿತರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು**)**

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ